ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕನಕಪುರ ರವರ ನ್ಯಾಯಾಲಯ, ಕನಕಪುರ

**ಸಿ ಸಿ ನಂಃ958/2019**

# ಃ ಆಪಾದನೆ ಃ

ನಾನು ಸುರೇಶ ಅಣ್ಣಪ್ಪ ಸವದಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಕನಕಪುರ, ಆದ ನಾನು

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಹಾರೋಹಳ್ಳಿ ಪೊಲೀಸ ಠಾಣೆ.

– ವಿರುದ್ಧ –

ಆರೋಪಿತರಾದ ಃ1. ದಿನೇಶ್.ಕೆ.ಎಂ
ಬಿನ್ ಮಲ್ಲೇಗೌಡ
ವಯಸ್ಸು 19 ವರ್ಷಗಳು

2. ಮಲ್ಲೇಗೌಡ
ಬಿನ್ ಲೇಟ್ ಕೆಂಪೇಗೌಡ ಉಃ ಬಸಪ್ಪ
ವಯಸ್ಸು 55 ವರ್ಷಗಳು

ಮೇಲ್ಕಂಡ ಆರೋಪಿತರ ವಾಸಃ
ಕಲ್ಲನಕುಪ್ಪೆ ಗ್ರಾಮ
ಮರಳವಾಡಿ ಹೋಬಳಿ
ಕನಕಪುರ ತಾಲ್ಲೂಕು
ರಾಮನಗರ ಜಿಲ್ಲೆ.

ಎಂಬ ಆರೋಪಿಗಳಾದ ನಿಮ್ಮಗಳ ಮೇಲೆ ಈ ಕೆಳಗಿನಂತ ಹೊರಿಸುವ ಆಪಾದನೆ ಏನೆಂದರೆಃ-

ದಿನಾಂಕ.05.07.2019 ರಂದು ರಾತ್ರಿ ಸುಮಾರು 8ಃ00 ಗಂಟೆ ಸಮಯದಲ್ಲಿ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಹಾರೋಹಳ್ಳಿ ಪೊಲೀಸ ಠಾಣೆ ಹದ್ದಿ ಪೈಕಿ ಕನಕಪುರ ತಾಲ್ಲೂಕು, ಹಾರೋಹಳ್ಳಿ ಟೌನಿನ ಹಾರೋಹಳ್ಳಿ-ಬಿಡದಿ ರಸ್ತೆ, ಮಯೂರು ಬೇಕರಿ ಮುಂಭಾಗದ ರಸ್ತೆಯಲ್ಲಿ 1 ನೇ ಆರೋಪಿಯಾದ ನೀವು ಚಾಲನಾ ಪರವಾನಗಿಯನ್ನು ಹೊಂದದೆ, ವಿಮೆ ಚಾಲ್ತಿಯಲ್ಲಿ ಇಲ್ಲದ 2 ನೇ ಆರೋಪಿಯ ಬಾಬ್ತು ಕೆಎ-42-ವಿ-6456 ರ ಟಿವಿಎಸ್ ಸ್ಟಾರ್ ಸಿಟಿ ಮೋಟಾರ್ ಸೈಕಲನ್ನು ಬಿಡದಿ ಕಡೆಯಿಂದ ಹಾರೋಹಳ್ಳಿ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಎಡಭಾಗದಲ್ಲಿ ಮನೆಗೆ ಹೋಗಲು ನಡೆದುಕೊಂಡು ಹೋಗುತ್ತಿದ್ದ ಚಾಸಾ-1 ಭೈರಾಜು ಮತ್ತು ಅವರ ತಂದೆ ಮುತ್ತುಭೈರಯ್ಯ ರವರಿಗೆ ಡಿಕ್ಕಿ ಪಡಿಸಿದ ಪರಿಣಾಮ ಮುತ್ತುಭೈರಯ್ಯ ರವರ ತಲೆ, ಹಣೆ, ಬಲತೊಡೆ, ಎಡಗಾಲಿನ ಮೊಣಕಾಲು ಬಲ ಮತ್ತು ಎಡಮೊಣಗೈ ಗಳಿಗೆ ಏಟ್ಟುಬಿದ್ದು ರಕ್ತಗಾಯಗಳಾಗಿ ಹಾರೋಹಳ್ಳಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಿದ್ದು, ಗುಣಮುಖವಾಗದೆ ದಿನಾಂಕ.15.07.2019 ರಂದು ಬೆಳಿಗ್ಗೆ 10ಃ05 ಗಂಟೆ ಸಮಯದಲ್ಲಿ

ಮೃತಪಟ್ಟಿದ್ದು ಹಾಗೂ 1 ನೇ ಆರೋಪಿಯಾದ ನೀವು ಸ್ಥಳದಲ್ಲಿ ವಾಹನವನ್ನು ನಿಲ್ಲಿಸಿ ನಿಮ್ಮ ಜವಬ್ದಾರಿಯನ್ನು ನಿರ್ವಹಿಸದೆ ಹೊರಟುಹೋಗಿದ್ದು ಹಾಗೂ 2 ನೇ ಆರೋಪಿಯಾದ ನೀವು ಚಾಲನಾ ಪರವಾನಗಿ ಹೊಂದಿಲ್ಲದ 1 ನೇ ಆರೋಪಿಗೆ ನಿಮ್ಮ ಕೆಎ-42-ವಿ-6456 ರ ಮೋಟಾರ್ ಸೈಕಲನ್ನು ನೀಡಿದ್ದು ಹಾಗೂ ನಿಮ್ಮ ವಾಹನಕ್ಕೆ ವಿಮೆಯನ್ನು ಹೊಂದಿಲ್ಲದಿರುವ ಮೂಲಕ ಭಾರತ ದಂಡ ಸಂಹಿತೆ ಕಲಂ 279 ಮತ್ತು 304(ಎ) ಮತ್ತು ಮೋಟಾರ್ ವಾಹನ ಕಾಯ್ದೆ ಕಲಂ 134(ಎ ಮತ್ತು ಬಿ), 180, 181, 196 ಮತ್ತು 187 ರಡಿ ಅಪರಾಧ ಮಾಡಿರುವಿರಿ.

ಸದರಿ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರೀ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ಆರೋಪಣೆಯನ್ನು ಈ ದಿನ ದಿನಾಂಕಃ 16.01.2024 ರಂದು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆವರ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ
ಕನಕಪುರ –

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉಃ

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉಃ

ಮೇಲಿನ ಹೇಳಿಕೆಯನ್ನು ಆಪಾದಿತನಿಗೆ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಡಿಕರಿಸುತ್ತೇನೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ
ಕನಕಪುರ